**ಎಸ್ ಸಿ ನಂ. 5078/2021**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿ ಡಬ್ಲೂಃ** 4

**ಪಿ ಡಬ್ಲೂಃ** 2

| | |
|---|---|
| ಸಾಕ್ಷಿಯ ಹೆಸರು - | ಸಿದ್ಧಲಿಂಗಮ್ಮ |
| ತಂದೆಯ ಹೆಸರು - | ನಾಗಭೂಷಣ |
| ವಯಸ್ಸು - | 53 ವರ್ಷ |
| ಉದ್ಯೋಗ - | ಗೃಹಿಣಿ |
| ವಾಸಸ್ಥಳ - | ಹನುಮನಹಳ್ಳಿ ಗ್ರಾಮ |

**ಸಾಕ್ಷಿಯನ್ನು ದಿನಾಂಕಃ** 16-03-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಪಿ. ಪಿ. ಅವರಿಂದ**

ಆರೋಪಿತರು ನನಗೆ ಗೊತ್ತು. ಚಾಸಾ **-1** ನನ್ನ ಅಕ್ಕನ ಮಗಳು. ಚಾಸಾ **-5** ನನ್ನ ಅಕ್ಕ.

**1** ನೇ ಆರೋಪಿಯೊಂದಿಗೆ ಚಾಸಾ **-1** ರವರ ಮದುವೆ **2014** ರಲ್ಲಿ ಜರುಗಿತ್ತು. ಆ ಸಮಯದಲ್ಲಿ ರೂ. **1,80,000/-** ನಗದು, **5** ತೊಲೆ ಬಂಗಾರ ಹಾಗೂ ಮೋಟಾರ್ ಸೈಕಲ್ ಖರೀದಿಗೆ ರೂ. **50,000/-** ಚೆಕ್ ನೀಡಿದ್ದರು. **1** ತಿಂಗಳು ಮಾತ್ರ ಚೆನ್ನಾಗಿ ಸಂಸಾರ ಮಾಡಿದ್ದು, ನಂತರ ಆರೋಪಿತರೆಲ್ಲ ಸೇರಿ ಪಿರ್ಯಾದಿಗೆ ದೈಹಿಕ ಹಾಗೂ ಮಾನಸಿಕ ಕಿರುಕುಳ ನೀಡಲು ಪ್ರಾರಂಭಿಸಿದರು. ಹೆಚ್ಚುವರಿಯಾಗಿ ರೂ. **5** ಲಕ್ಷ ಹಾಗೂ ಹಡಗಲಿಯ ಮನೆ ಹಾಗೂ **5** ಎಕರೆ ಜಮೀನನ್ನು ವರದಕ್ಷಿಣೆಯಾಗಿ ತರಬೇಕೆಂದು ಕೇಳಿದ್ದರು. ದೈಹಿಕವಾಗಿ ಹಲ್ಲೆ ಮಾಡಿದ್ದರು. ಈ ವಿಚಾರ ಪಿರ್ಯಾದಿ ನನಗೆ ಫೋನ್ ಮೂಲಕ ಹಾಗೂ ಸಿಕ್ಕಿದಾಗಲೆಲ್ಲಾ ಹೇಳುತ್ತಿದ್ದಳು. ತವರು ಮನೆಯಲ್ಲಿಯೂ ಸಹ ಹೇಳಿದ್ದಳು. ಈ ಬಗ್ಗೆ **3-4** ಪಂಚಾಯತಿ ನಡೆದು ಬುದ್ದಿ ಹೇಳಲಾಗಿತ್ತು. ದಿಃ **03-01-2014** ರಂದು ಆಕೆ ನನ್ನ ಮನೆಗೆ ಬಂದು ತನ್ನನ್ನು ಸೀಮೆ ಎಣ್ಣೆ ಹಾಕಿ ಸುಡಲು ಪ್ರಯತ್ನಿಸಿದ್ದಾರೆ ಎಂದು ಹೇಳಿದ್ದರು.

ದಿಃ **08-02-2016** ರಂದು ಪಿರ್ಯಾದಿಗೆ ಹಲ್ಲೆ ಮಾಡಿ ಹೆಚ್ಚಿನ ವರದಕ್ಷಿಣೆ ತರುವಂತೆ ತವರು ಮನೆಗೆ ಕಳುಹಿಸಿರುತ್ತಾರೆ. ನಂತರ ಪಂಚಾಯತಿ ನಡೆದು ಚಾಸಾ **-5** ಮತ್ತು ನಾನು ಆಕೆಯನ್ನು ಗಂಡನ ಮನೆಗೆ ದಿಃ **06-03-2014** ರಂದು ಬಿಟ್ಟು ಬಂದಿದ್ದೇವು. ಮಧ್ಯಾಹ್ನ **02.30** ರ ಸಮಯದಲ್ಲಿ ಆರೋಪಿತರೆಲ್ಲರೂ ಮನೆಯಲ್ಲಿದ್ದು, ನಮ್ಮನ್ನು ನೋಡಿ ನಿಂದಿಸಿ, ಪಿರ್ಯಾದಿಯ ಕೂದಲು ಹಿಡಿದು ಎಳೆದಾಡಿ, ಕಾಲಿನಿಂದ ಒದ್ದು, ಗೋಡೆಗೆ ತಲೆ ಚಚ್ಚಿದರು. ಚಾಸಾ **-5** ರವರ ಬೆನ್ನು ಮತ್ತು ಕೆನ್ನೆಗೆ ಹಲ್ಲೆ ಮಾಡಿದರು. ನಾನು ಬಿಡಿಸಲು ಹೋದಾಗ ಪ್ರಾಣ ಬೆದರಿಕೆ ಹಾಕಿದರು. **1** ನೇ ಆರೋಪಿ ಕೊಲೆ ಮಾಡುವ ಉದ್ದೇಶದಿಂದ ಪಿರ್ಯಾದಿಯ ಕುತ್ತಿಗೆ ಹಿಚುಕಿದ. ಬಿಡಿಸಲು ಹೋದ ನಮ್ಮ ಮೇಲೆ ಹಲ್ಲೆ ಮಾಡಿದರು.

ನಂತರ ಗ್ರಾಮದ ಹಿರಿಯರನ್ನು ಸಂಪರ್ಕಿಸಿ ದೂರು ನೀಡಿರುತ್ತೇವೆ. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿದ್ದಾರೆ. ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ. **1** ನೇ ಆರೋಪಿ ಈಗಾಗಲೇ ದೊಡ್ಡ ಬಸಮ್ಮ ಎಂಬಾಕೆಯನ್ನು ಎರಡನೇ ಮದುವೆಯಾಗಿರುತ್ತಾನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ ವಿ ಪಿ., ವಕೀಲರಿಂದಃ**

ನಾನು ಸ್ನಾತಕೋತ್ತರ ಪಧವಿಧರೆ. ನಿಪಿಃ 1 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು. ನಿಪಿಃ 1 ರಲ್ಲಿ ವಿವಾಹದ ಸಂದರ್ಭದಲ್ಲಿ ರೂ. 5 ಲಕ್ಷ ನಗದು, 10 ತೊಲೆ ಬಂಗಾರಕ್ಕೆ ಬೇಡಿಕೆ ಇಟ್ಟಿದ್ದರು ಎಂದು ನಮೂದಾಗಿದೆ ಅಂದರೆ ಸರಿ. ಅದರಲ್ಲಿ ಬಟ್ಟೆ ಬರೆಗೆ ರೂ. 3 ಲಕ್ಷ ಹಣಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಬರೆಯಲಾಗಿದೆ ಅಂದರೆ ಸರಿ. ಚಾಸಾ -1 ಗಂಡನ ಮನೆಯಲ್ಲಿ ಕೇವಲ 2 ದಿನ ಮಾತ್ರ ಇದ್ದಳು ಅಂದರೆ ಸರಿಯಲ್ಲ.

ಮದುವೆಯಾಗಿ 15 ದಿನಕ್ಕೆ ನಾನು ಆಕೆಯನ್ನು ಪಾಂಡುರಂಗ ವೈದ್ಯರ ಬಳಿ ಮಾನಸಿಕ ರೋಗಕ್ಕೆ ಚಿಕಿತ್ಸೆ ಕೊಡಿಸಿದ್ದೆ ಅಂದರೆ ಸರಿಯಲ್ಲ. ದಿಃ 15-08-2014 ರಿಂದ 15-09-2014 ರವರೆಗೆ ಚಾಸಾ -1 ರವರು ಪಾಂಡುರಂಗ ವೈದ್ಯರ ಬಳಿ ಮಾನಸಿಕ ತಜ್ಞರ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಿಸಿದ್ದೇವು ಅಂದರೆ ಸರಿಯಲ್ಲ.

ನಾನೇ 2 ಬಾರಿ ಆಕೆಗೆ ಚಿಕಿತ್ಸೆ ಕೊಡಿಸಿದ್ದೇನೆ ಅಂದರೆ ಸರಿಯಲ್ಲ. ಚಾಸಾ -1 ರವರಿಗೆ ಮಾನಸಿಕ ರೋಗವಿದ್ದು, ಅದನ್ನು ಮುಚ್ಚಿಟ್ಟು 1 ನೇ ಆರೋಪಿಯೊಂದಿಗೆ ಮೋಸದಿಂದ ಮದುವೆ ಮಾಡಿದ್ದೇವೆ ಅಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯಗಳನ್ನು ಪೋಲಿಸರ ಮುಂದೆ ಹೇಳಿದ್ದೇನೆ. ಪ್ರಾ, ಸಾ 4 ರವರು ಯಾವುದೇ ಪಂಚಾಯತಿಯಲ್ಲಿ ಭಾಗವಹಿಸಿಲ್ಲ ಅಂದರೆ ಸರಿಯಲ್ಲ. ಹೈ ಕೋರ್ಟನ ನಿರ್ದೇಶನದ ಮೇರೆಗೆ ಪ್ರಾ, ಸಾ 4 ಮಗಳ ಮದುವೆ ಮಾಡಿಸಿದ್ದ ಅಂದರೆ ಸರಿಯಲ್ಲ. ನಾನೇ ನನ್ನ ಅಕ್ಕನ ಸಂಸಾರ ಹಾಳು ಮಾಡಿದ್ದೇನೆ ಅಂದರೆ ಸರಿಯಲ್ಲ. ನನ್ನ ಪ್ರಕಾರ ಅವರು ಈವತ್ತಿಗೂ ಸಹ ಕೂಡಿಯೇ ಇದ್ದಾರೆ ಅಂದರೆ ಸರಿ. ಚಾಸಾ -5 ಮತ್ತು 6 ರವರು ಒಂದೇ ಮನೆಯಲ್ಲಿ ಇರುವುದನ್ನು ನಾನು ನೋಡಿದ್ದೇನೆ.

ಪಿರ್ಯಾದಿಯ ಮೇಲೆ ಸೀಮೆಎಣ್ಣೆ ಸುರಿದು ಕೊಲೆ ಪ್ರಯತ್ನ ಮಾಡಿದ ಬಗ್ಗೆ ಪೋಲಿಸ ದೂರು ನೀಡಿಲ್ಲ. ಪೆಬ್ರವರಿ 8 ಕ್ಕೆ ಚಾಸಾ -1 ಗಂಡನ ಮನೆಯಿಂದ ಹೊರ ಹಾಕಿದ್ದರು. ಮಾರ್ಚ 6 ನೇ ತಾರೀಖು ನಾವು ಆಕೆಯನ್ನು ಕರೆದುಕೊಂಡು ಹೋಗಿದ್ದೇವು. ಆ ದಿನ ನಾನು ಮತ್ತು ಚಾಸಾ -5 ಮಾತ್ರ ಪಿರ್ಯಾದಿಯೊಂದಿಗೆ ಹೋಗಿದ್ದೇವು. ಆ ದಿನ ಬೇರೆ ಯಾವ ಗಂಡಸರು ನಮ್ಮ ಜೊತೆ ಬಂದಿರಲಿಲ್ಲ. ಪಂಚಾಯತಿದಾರರೇ ನಮ್ಮನ್ನು ಕಳುಹಿಸಿದ್ದರು ಎಂದು ಪೋಲಿಸರ ಮುಂದೆ ಹೇಳಿದ್ದೇನೆ. ಅವರ ಹೆಸರನ್ನು ಹೇಳಿ ಬರೆಸಿದ್ದೀರಾ ಅಂದರೆ ಹೌದು.

6 ನೇ ತಾರೀಖು ನಾವು ಆಸ್ಪತ್ರೆಗೆ ಹೋಗಲಿಲ್ಲ. ಹಿರಿಯರಿಗೆ ಮಾಹಿತಿ ತಿಳಿಸಿದೆವು. ಖಾಸಗಿ ಆಸ್ಪತ್ರೆಯಲ್ಲಿ ಡಾಃ ಜಂಬಣ್ಣ ರವರಿಂದ ಚಿಕಿತ್ಸೆ ಪಡೆದಿದ್ದೇವು. ರಕ್ತ ಸುರಿದು, ಬಟ್ಟೆ ರಕ್ತವಾಗಿತ್ತು. ಒಳರೋಗಿಯಾಗಿ ದಾಖಲಾಗಿಲ್ಲ. ಮತ್ತೇ ಹೇಳುತ್ತೇನೆ ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ, ಔಷಧಿ ಅಂಗಡಿಯಲ್ಲಿ ಚಿಕಿತ್ಸೆ ಕೊಡಿಸಿದ್ದೇನೆ. ರಕ್ತ ಸುರಿಯುತ್ತಿದ್ದರೂ ಚಿಕಿತ್ಸೆ ಏಕೆ ಕೊಡಿಸಲಿಲ್ಲ ಅಂದರೆ ನಾವು ಗಾಬರಿಯಲ್ಲಿದ್ದು, ಔಷಧಿ ಅಂಗಡಿಯಲ್ಲಿಯೇ ಚಿಕಿತ್ಸೆ ಮಾಡಿದ್ದೇವು.

ಪೋಲಿಸ ದೂರು ಕೊಡಬೇಕೆಂದು ನನಗೆ ಅನಿಸಿತು. ಆದರೆ, ಹಿರಿಯರು ಜೀವನ ಹಾಳಾಗುತ್ತದೆ ಎಂದು ನಮ್ಮನ್ನು ತಡೆದಿದ್ದರು.

**ಈ ಹಂತದಲ್ಲಿ ನ್ಯಾಯಾಲಯದ ಕಾಲಾವಕಾಶ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು**.

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯನಗರ ಜಿಲ್ಲೆ, ಹೊಸಪೇಟೆ.